# ತುಮಕೂರು ವಿಶ್ವವಿದ್ಯಾನಿಲಯ

ಸಂಖ್ಯೆ:ತುವಿ:ಅ.ವಿ:ತಾ.ಸ.ನೇ:2025-26/135

ದಿನಾಂಕ:19.04.2025

## : ಅಧಿಸೂಚನೆ :

ತುಮಕೂರು ವಿಶ್ವವಿದ್ಯಾನಿಲಯದ ಸಾರ್ವಜನಿಕ ಸಂಪರ್ಕಾಧಿಕಾರಿ ಕಚೇರಿ ಹಾಗೂ ಸ್ನಾತಕೋತ್ತರ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸುಗಮ ಕಾರ್ಯನಿರ್ವಹಣೆಗಾಗಿ ಅವಶ್ಯವಿರುವ **ತಾಂತ್ರಿಕ ಸಹಾಯಕರ** (ತಾತ್ಕಾಲಿಕ) ನೇಮಕಾತಿಗಾಗಿ ದಿನಾಂಕ:28.04.2025 ರಂದು ಬೆಳಿಗ್ಗೆ 11.00 ಗಂಟೆಗೆ ಮಾನ್ಯ ಕುಲಪತಿಗಳ ಕಾರ್ಯಾಲಯ, ತುಮಕೂರು ವಿಶ್ವವಿದ್ಯಾನಿಲಯ, ಬಿ.ಹೆಚ್. ರಸ್ತೆ, ತುಮಕೂರು ಇಲ್ಲಿ ನೇರ ಸಂದರ್ಶನ (Walk-in Interview) ಕರೆಯಲಾಗಿದೆ.

ಅರ್ಹ ಅಭ್ಯರ್ಥಿಗಳು ತಮ್ಮ ಮೂಲ ದಾಖಲೆಗಳೊಂದಿಗೆ (ಒಂದು ಸೆಟ್ ಜೆರಾಕ್ಸ್ ಪ್ರತಿಯೊಂದಿಗೆ) ದಿನಾಂಕ:28.04.2025 ರಂದು ಬೆಳಿಗ್ಗೆ 10.00 ಗಂಟೆಗೆ ಹಾಜರಿರತಕ್ಕದ್ದು.

ತಾಂತ್ರಿಕ ಸಹಾಯಕರ ನೇಮಕಾತಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಹಾಗೂ ಇತರೆ ಮಾನದಂಡಗಳ ವಿವರ ಕೆಳಕಂಡಂತಿದೆ.

ವಿದ್ಯಾರ್ಹತೆ: 1. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ/ಎಲೆಕ್ಟ್ರಾನಿಕ್ಸ್ ಮೀಡಿಯಾ ಅಥವಾ ಸಂಬಂಧಿತ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿರಬೇಕು.

ಅಪೇಕ್ಷಣಿಯ ಕೌಶಲ್ಯಗಳು:

1. ವರದಿಗಾರಿಕೆ, ಪರಿಷ್ಕರಣೆ ಕೌಶಲವಿರಬೇಕು.
2. ಛಾಯಾಗ್ರಹಣ, ವೀಡಿಯೋ ಚಿತ್ರೀಕರಣ, ವೀಡಿಯೋ ಎಡಿಟಿಂಗ್, ಪುಟ ವಿನ್ಯಾಸ ತಿಳಿದಿರಬೇಕು.
3. ಅಡೋಬ್ ಇನ್‌ಡಿಸೈನ್, ಪ್ರೀಮಿಯರ್ ಪ್ರೋ, ಆಡಿಶನ್, ಫೋಟೋಶಾಪ್, ಕೋರೆಲ್ ಡ್ರಾ ಇತ್ಯಾದಿ ಸಾಫ್ಟ್‌ವೇರ್‌ಗಳನ್ನು ಬಳಸಲು ತಿಳಿದಿರಬೇಕು.
4. ಉತ್ತಮ ಸಂವಹನ ಕೌಶಲವಿರಬೇಕು.
5. ಸಾಮಾಜಿಕ ಜಾಲತಾಣಗಳ ನಿರ್ವಹಣೆ ತಿಳಿದಿರಬೇಕು.
6. ಮಾಧ್ಯಮ ಸಂಸ್ಥೆಗಳಲ್ಲಿ ಕನಿಷ್ಠ ಒಂದು ವರ್ಷ ಕಾರ್ಯನಿರ್ವಹಿಸಿದ ಅನುಭವ ಇರಬೇಕು.

ಹೆಚ್ಚಿನ ಮಾಹಿತಿಗಾಗಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು ಇವರನ್ನು ಸಂಪರ್ಕಿಸುವುದು.

ಆದೇಶದ ಮೇರೆಗೆ

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು